ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಚುನಾವಣಾ ವರ್ಷದಲ್ಲಿ ಆದ ಕೆಲಸಗಳಿಗೆ ಬೇರೆ ಇಲ್ಲವೆಂಬುದು. ತಮ್ಮ ಅಭಿಪ್ರಾಯವೇ? ಮೌನವಾಗಿ ತಾವು ಇದು ಸರಿಯಲ್ಲ ಎಂದು ಹೇಳಿಬಿಟ್ಟಿರಲ್ಲಾ, ಏನಿದರ ಅರ್ಥವೆಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಕ್ಷೇತ್ರದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತಿಲ್ಲ,, ಅಲ್ಲಿ ಬಹಳಷ್ಟು ವಾಟರ್ ಸಪ್ಲೈಸ್ ಸ್ಕೀಮ್ ಕಂಪ್ಲೀಟ್ ಆಗಿಲ್ಲ ಎಂದು ಒಂದೆರಡು ಬಾರಿ ಸದನದಲ್ಲಿ ಧರಣಿ ಮಾಡಿದ್ದರು. ಈ ಯೋಜನೆಗಳು ಏಕೆ ಕಂಪ್ಲೀಟ್ ಆಗಿಲ್ಲವೆಂದರೆ ಮಾನ್ಯ ವಾಟಾಳ್‌ರವರು ಅದಕ್ಕೆ ಸರಿಯಾಗಿ ಗುದ್ದಲಿ ಪೂಜೆ ಮಾಡಿಸಿಲ್ಲವೆಂದು ತೋರುತ್ತದೆ. ಅದಕ್ಕೇ ಯೋಜನೆಗಳೊಂದೂ ಜಾರಿಗೆ ಬಂದಿಲ್ಲ.

## ವಿರಾಜಪೇಟೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಗಳು.

393 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವಿರಾಜಪೇಟೆ ತಾಲ್ಲೂಕಿನಲ್ಲಿ 1995-96, 1996-97, 1997-98ರ ಸಾಲಿನಲ್ಲಿ ಕೆರು ನೀರಾವರಿ ಯೋಜನೆಗಳ ಅನುಷ್ಠಾನ: ದುರಸ್ಥೀಕರಣ: ನವೀಕರಣ ಇವುಗಳಿಗಾಗಿ ಮಾಡಿರುವ ವೆಚ್ಚವೆಷ್ಟು? ಮತ್ತು ಯಾವ ಯಾವ ಕಾಮಗಾರಿಗಳ ಸಲುವಾಗಿ ವೆಚ್ಚ ಮಾಡಲಾಗಿದೆ? (ವಿವರ ನೀಡುವುದು)*

ಆ) *ವಿರಾಜಪೇಟೆ ತಾಲ್ಲೂಕಿನಲ್ಲಿ ನೀರಾವರಿ ಇಲಾಖೆಯು ಯಾವ ಯಾವ ಕಾಮಗಾರಿಗಳಿಗೆ ಆದ್ಯತೆ ನೀಡಬೇಕೆಂದು ಪಟ್ಟಿ ತಯಾರಿಸಿದೆ ಮತ್ತು ಅವು ಯಾವುವು?*

ಇ) *ಸರ್ಕಾರದ ಈ ಪಟ್ಟಿ ಅನ್ವಯ ವೆಚ್ಚ ಮಾಡಲು ಎಷ್ಟು ಹಣವನ್ನು 1998-99ರ ಸಾಲಿನಲ್ಲಿ ಮಂಜೂರು ಮಾಡಿರುತ್ತದೆ?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ) :

ಅ) ವಿವರಗಳನ್ನು ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಇ) 1998-99ನೇ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

1) ಸಣ್ಣ ನೀರಾವರಿ ವಲಯ - ರೂ.20.18 ಲಕ್ಷ

2) ಜಿಲ್ಲಾ ಪಂಚಾಯ್ತಿ ಕೊಡಗು ಜಿಲ್ಲೆ - ರೂ.10.00 ಲಕ್ಷ

ಈ ಅನುದಾನದ ತಾಲ್ಲೂಕುವಾರು ಮರುವಿಂಗಡಣೆ ಇನ್ನೂ ಮಾಡಿರುವುದಿಲ್ಲ.

## ಅನುಬಂಧ - 1

(ಲಕ್ಷ ರೂ.ಗಳಲ್ಲಿ)

| ವರ್ಷ | ಸಣ್ಣ ನೀರಾವರಿ ವಲಯ | ಜಿಲ್ಲಾ ಪಂಚಾಯತ್ | ಒಟ್ಟು |
|---|---|---|---|
| 1995-96 | 6.69 | 9.97 | 16.66 |
| 1996-97 | 30.12 | 13.20 | 43.32 |
| 1997-98 | 2.78 | 6.06 | 8.84 |
| **ಒಟ್ಟು** | **39.59** | **29.23** | **68.82** |

## ಅನುಬಂಧ - 2

***2702 ಯೋಜನೇತರ ಕಾಮಗಾರಿಗಳ ಪಟ್ಟಿ :***

| **I 95-99** | **ರೂ.ಗಳು** |
|---|---|
| 1. ಬಾಲಾಜಿ ಅಣೆಕಟ್ಟು | 25551.00 |
| 2. ಬಿ. ಶೆಟ್ಟಿಗೆರೆ ಏತ ನೀರಾವರಿ ಯೋಜನೆ | 29986.00 |
| 3. ರುದ್ರಗುಪ್ಪೆ ಏತ ನೀರಾವರಿ ಯೋಜನೆ | 26643.00 |
| 4. ಹೊನ್ನೇಕೊಪ್ಪ ಅಣೆಕಟ್ಟು | 13965.00 |
| 5. ಕರವಿಗೋಡು ಏತ ನೀರಾವರಿ ಯೋಜನೆ | 55541.00 |
| 6. ದಾತೂರು ಪಿಕಪ್ ಕಾಲುವೆ | 9318.00 |
| 7. ಕರಡಿಗೋಡು ಏತ ನೀರಾವರಿ ಯೋಜನೆಯ ಕಾಲುವೆ ದುರಸ್ತಿ ಮತ್ತು ಲೈನಿಂಗ್ | 152841.00 |
| | **313845.00** |
| **II 96-97** | |
| 1. ಬಾಲಾಜಿ ಅಣೆಕಟ್ಟು | 15589.00 |
| 2. ಹೊನ್ನಿಕೊಪ್ಪ ಅಣೆಕಟ್ಟು | 26386.00 |
| 3. ಬಿ. ಶೆಟ್ಟಿಗೆರೆ ಏತ ನೀರಾವರಿ ಯೋಜನೆ | 17,842.00 |
| 4. ರುದ್ರಗುಪ್ಪೆ ಏತ ನೀರಾವರಿ ಯೋಜನೆ | 18096.00 |
| 5. ಕರಿಡಿಗೋಡು ಏತ ನೀರಾವರಿ ಯೋಜನೆ | 65880.00 |
| 6. ದಾತೂರು ಪಿಕಪ್ ಕಾಲುವೆ ಚೈ.0 ರಿಂದ 2.6.ಕಿ.ಮೀ ವರೆಗೆ ಮುಖ್ಯ ಕಾಲುವೆ ದುರಸ್ತಿ. | 49164.00 |

| | |
|---|---|
| 7. -"- ಚೈ 0.45 ರಿಂದ 3 ಕಿ.ಮೀ ವರೆಗೆ | 49559.00 |
| 8. ಬಾಲಾಜಿ ಅಣೆಕಟ್ಟು ಎಡದಂಡೆ ಕಾಲುವೆ ದುರಸ್ತಿ | 49550.00 |
| 9. ದಾತನೂರು ಪಿಕಪ್ ಕಾಲುವೆ ದುರಸ್ತಿ | 49406.00 |
| 10. ದೇವನೂರು ಪಿಕಪ್ ಕಾಲುವೆ ದುರಸ್ತಿ | 49823.00 |
| 11. ಬೊಕ್ಕೆನೊಡಲೂರು ಪಿಕಪ್ ಕಾಲುವೆ ದುರಸ್ತಿ | 48043:00 |
| 12. ಹೊನ್ನೇಕೊಪ್ಪ ಪಿಕಪ್ ಕಾಲುವೆ ದುರಸ್ತಿ | 49786.00 |
| 13. ದಾತೂರು ಪಿಕಪ್‌ನ ಎಡದಂಡೆ ಉಪ ಕಾಲುವೆ ದುರಸ್ತಿ ಚೈ.ಎಂ ಯಿಂದ 3.00 ಕಿ.ಮೀ. | 49450.00 |
| 14. ಬಾಲಾಜಿ ಎಡದಂಡೆ ಕಾಲುವೆಯ 1.250 ಕಿ.ಮೀ ಹತ್ತಿರ ಸ್ಲಾಬ್ ಕಲ್ವರ್ಟ್ ನಿರ್ಮಾಣ | 18092.00 |
| | **556686.00** |

**III 97-98**

| | |
|---|---|
| 1. ಬಾಲಾಜಿ ಅಣೆಕಟ್ಟು ಕಾಲುವೆ. | 19582.00 |
| 2. ಕುದನೂರು ಪಿಕಪ್ ಕಾಲುವೆ ದುರಸ್ತಿ | 48452.00 |
| 3. ಹೊನ್ನೇಕೊಪ್ಪ ಅಣೆಕಟ್ಟು | 56536.00 |
| 4. ರುದ್ರಗುಪ್ಪೆ ಏತ ನೀರಾವರಿ ಯೋಜನೆ | 41646.00 |
| 5. ಬಿ. ಶೆಟ್ಟಿಗೆರೆ ಏತ ನೀರಾವರಿ ಯೋಜನೆ | 16834.00 |
| 6. ಕರಡಿಗೋಡು ಏತ ನೀರಾವರಿ ಯೋಜನೆ | 316.00 |
| | **182916.00** |

**ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಮಾಡಲಾದ ವೆಚ್ಚದ ವಿವರ : (ಲಕ್ಷ ರೂ.ಗಳಲ್ಲಿ)**

| | ಅಂದಾಜು ಮೊತ್ತ | 1995-96 | 1996-97 | 1997-98 |
|---|---|---|---|---|
| 1. ಚಿಕ್ಕೆನಡ್ಲೂರು ಬಳಿ ಪ್ರವಾಹ ನಿಯಂತ್ರಣ ಕಾಮಗಾರಿ | 8.00 | 2.84 | 8.09 | - |
| 2. ಕೊಲ್ಲೀ ತೋಡು ಪ್ರವಾಹ ನಿಯಂತ್ರಣ ಕಾಮಗಾರಿ | 11.00 | - | 11.46 | - |
| 3. ಹರಿಹರ ಎಂಬಲ್ಲಿ ಮುಕ್ಕಟೀರ ಮೇದಪ್ಪ ಇವರ ಹೊಲದ ಬಳಿ | | | | |

| 1 | 2 | 3 | 4 | 5 | 6 |
|---|---|---|---|---|---|
| | ಲಕ್ಷ್ಮಣ ತೀರ್ಥ ನದಿಗೆ ಪ್ರವಾಹ ನಿಯಂತ್ರಣ ಕಾಮಗಾರಿ. | 1.50 | - | 1.46 | - |
| 4. | ಬಾಲಾಜಿ ಅಣೆಕಟ್ಟಿನ ಮೇಲ್ಭಾಗದಲ್ಲಿ ಕೀರೆ ಹೊಳೆಯ ದಂಡೆಯ ಇಕ್ಕೆಲಗಳಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿ | 3.50 | - | 3.54 | - |
| 5. | ಕೆಮ್ಮೂರು ಗ್ರಾಮದಲ್ಲಿ ರಾಮತೀರ್ಥ ನದಿಗೆ ಪ್ರವಾಹ ನಿಯಂತ್ರಣ ಕಾಮಗಾರಿ | 3.00 | 0.91 | - | 0.95 |
| | **ಒಟ್ಟು** | | **3.55** | **24.55** | **0.95** |

**ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಕಾಮಗಾರಿಗಳಿಗೆ ಮಾಡಲಾದ ವೆಚ್ಚದ ವಿವರ :**

| ಕ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | 1995-96 ವೆಚ್ಚ | 1996-97 ವೆಚ್ಚ | 1997-98 ವೆಚ್ಚ | ಒಟ್ಟು ವೆಚ್ಚ |
|---|---|---|---|---|---|---|
| | ***4702-01-02 ಅಣೆಕಟ್ಟು ಪಿಕಪ್ ನಿರ್ಮಾಣ :*** | | | | | |
| 1. | ಜಮ್ಮಡ ಚಿಣ್ಣಪ್ಪನವರ ಮನೆ ಹತ್ತಿರ ಮಹಾತೋಡುಹಳ್ಳಕ್ಕೆ ಪಿಕಪ್ ನಿರ್ಮಾಣ. | 2.00 | 1.47 | 0.53 | 0.90 | 2.00 |
| 2. | ನಾಲ್ಕೇರಿ ಹಿಲ್ಲೇತೋಡಿಗೆ ಪಿಕಪ್ ನಿರ್ಮಾಣ | 2.00 | 0.49 | 1.51 | - | 2.00 |
| 3. | ಕೊಟ್ಟಗೇರಿ ಲಕ್ಷ್ಮಣ ತೀರ್ಥ ನದಿ ಬದಿಯ ಕೊರೆತವನ್ನು ನಿಯಂತ್ರಿಸಲು ತಡಗೋಡೆ ನಿರ್ಮಾಣ. | 2.00 | 1.06 | 0.94 | - | 2.00 |
| 4. | ಮತ್ತೊರು ಗ್ರಾಮದ ಸರ್ವೆ ನಂ.30ರ ತೋಡಿಗೆ ನಿರ್ಮಿಸಿದ ಪಿಕಪ್ ದುರಸ್ತಿ | 2.40 | - | - | 0.30 | 0.30 |

| ಕ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | 1995-96 ವೆಚ್ಚ | 1996-97 ವೆಚ್ಚ | 1997-98 ವೆಚ್ಚ | ಒಟ್ಟು ವೆಚ್ಚ |
|---|---|---|---|---|---|---|
| ***4702-01-3 ಒಡೆದುಹೋದ ಬತ್ತಿಹೋದ ಕೆರೆಗಳನ್ನು ಪೂರ್ಣಸ್ಥಿತಿಗೆ ತರುವುದು :*** | | | | | | |
| 1. | ದೇವನೂರು ಅಣಕಟ್ಟಿನಿಂದ ಬೆಟ್ಟತ್ತೂರು ಹಾಗೂ ತಾವರೆಕೆರೆ ಮೂಲಕ ಹರಿಯುವ ಕಾಲುವೆ ದುರಸ್ತಿ. | 1.00 | 1.00 | - | - | 1.00 |
| 2. | ಮತ್ತೊಂದು ವೈಸಾರಿ ಕೆರೆ ದುರಸ್ತಿ | 1.00 | 1.00 | - | - | 1.00 |
| 3. | ಜುಳುಗುಂದ ಕೆರೆ ದುರಸ್ತಿ | 1.00 | 0.03 | 0.07 | - | 1.00 |
| 4. | ಕೆವ ಮುಳ್ಳೂರು ಗ್ರಾಮದ ಜೂರಿಯಾಲ ಹರಿಜನ ಕಾಲೋನಿ ಕೆರೆ ಅಭಿವೃದ್ಧಿ | 1.20 | 0.83 | - | - | 0.83 |
| 5. | ಬಿ. ಶೆಟ್ಟಿಗೇರಿ ಗ್ರಾ.ಪಂ.ಜಿ. ಶೆಟ್ಟಗೇರಿ ಗ್ರಾಮದ ಅಯ್ಯಪ್ಪ ದೇವರ ಕೆರೆ ಬಲಪಡಿಸುವುದು. | 1.00 | - | - | 1.00 | 1.00 |
| 6. | ಮಾಲ್ದಾರೆ ಅಚ್ಚುತ ಕೆರೆ ಅಭಿವೃದ್ಧಿ ಪಡಿಸುವುದು. | 1.90 | - | - | 1.00 | 1.90 |
| ***2551 ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ :*** | | | | | | |
| 7. | ಕೊಟ್ಟಗೇರಿ ಗ್ರಾಮಕ್ಕೆ ಏತ ನೀರಾವರಿ ಯೋಜನೆ. | 3.00 | 1.06 | - | - | 1.06 |
| 8. | ಚೇಳೂರು ಗ್ರಾಮಕ್ಕೆ ಏತ ನೀರಾವರಿ ಯೋಜನೆ. | 3.20 | 1.82 | - | - | 1.82 |
| 9. | ಕಾವಾಡಿ ಹಳ್ಳಕ್ಕೆ ಪಿಕಪ್ ನಿರ್ಮಾಣ | 1.70 | 1.21 | 0.49 | - | 1.20 |
| 10. | ಬಿರುವಾಣಿ ಮೂಕಳಮೂಡು ಕುಟುಂಬಸ್ಥರ ಮನೆ ಹತ್ತಿರ ಪಿಕಪ್ ನಿರ್ಮಾಣ. | 2.00 | - | 2.00 | - | 2.00 |
| 11. | ಕಾನೂರು ಪಿಕಪ್ ಮತ್ತು ನಾಲೆ ದುರಸ್ತಿ | 2.00 | - | 1.03 | 0.43 | 1.16 |

| ಕ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | 1995-96 ವೆಚ್ಚ | 1996-97 ವೆಚ್ಚ | 1997-98 ವೆಚ್ಚ | ಒಟ್ಟು ವೆಚ್ಚ |
|---|---|---|---|---|---|---|
| ***2702-0102-72 ಕೆರೆ ಮತ್ತು ಬಾವಿ ಅಳವಡಿಸುವುದು :*** | | | | | | |
| 12. | ಈಜೂರು ಗ್ರಾಮದ ದಬ್ಬಮಭದ್ರಕಾಳಿ ದೇವರ ಕೆರೆ ಅಳವಡಿಸುವುದು. | 1.25 | - | 1.25 | - | 1.25 |
| 13. | ಹಾಲಗುಂದ ಬೈಸಾರಿ ಕೆರೆ ಅಭಿವೈದ್ಧಿ | 1.50 | - | 1.50 | - | 150 |
| 14. | ಅಮ್ಮತ್ತಿ ಗ್ರಾಮಸ್ಥರ ಕೆರೆ ಅಭಿವೃದ್ಧಿ | 1.50 | - | 1.50 | - | 1.50 |
| 15. | ಬಲ್ಯ ಮಂದೂರು ವೈಸಾರ ಕೆರೆ ಅಳವಡಿಸುವುದು | 1.00 | - | 0.52 | 0.48 | 1.00 |
| 16. | ದುಡಿಗೇರಿ ಪೆಗ್ಗರ ಕೆರೆ ಅಭಿವೃದ್ಧಿ | 1.00 | - | - | 0.97 | 097 |
| 17. | ಮುಗಟಕೇರಿ ಪೈಸಾರಿ ಕೆರೆ ಅಭಿವೃದ್ಧಿ | 1.00 | - | - | 0.98 | 0.98 |
| 18. | ಸುಳುಗೋಡು ಪೈಸಾರಿ ಕೆರೆ ಅಭಿವೃದ್ಧಿ | 1.00 | - | 0.96 | - | 0.96 |
| | **ಒಟ್ಟು** | | **9.97** | **13.20** | **6.06** | **29.23** |

## ಅನುಬಂಧ - 3

*(ಸಣ್ಣ ನೀರಾವರಿ ವಲಯ)*

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಶೀರ್ಷಿಕೆ | ಮೊತ್ತ | 1998-99 ರ ಅನುದಾನ | ಶರಾ |
|---|---|---|---|---|---|
| 1 | 2 | 3 | 4 | 5 | 6 |
| 1. | ಹೊನ್ನಿಕೊಪ್ಪ ಅಣೆಕಟ್ಟು ಮತ್ತು ನಾಲೆಗಳ ದುರಸ್ತಿ ಹಾಗೂ ಹೂಳು ತೆಗೆಯುವುದು. | 4702 ಕೆರೆ ಕಲ್ಯಾಣ | 5.00 | 1.50 | ಹೊಸ ಕಾಮಗಾರಿಗಳು |
| 2. | ಬಾಲಾಜಿ ಅಣೆಕಟ್ಟಿನ ನಾಲೆಯ ಹೂಳು ತೆಗೆಯುವುದು ಹಾಗೂ ದುರಸ್ತಿ | -"- | 5.00 | 1.50 | -"- |
| 3. | ದೇವಾನೂರು ಅಣೆಕಟ್ಟಿನ ಕಾಲುವೆ ದುರಸ್ತಿ | -"- | 5.00 | 0.01 | -"- |
| 4. | ಹರಿಹರ ಮತ್ತು ಹಾಲ್ಕೇರಿ ಗಾಮಗಳ ಮಧ್ಯೆ ಹರಿಯುವ ಲಕ್ಷ್ಮಣ ತೀರ್ಥ ಹೊಳೆಗೆ ಅಡ್ಡ ಸೇತುವೆ ನಿರ್ಮಾಣ | -"- | 2.50 | 0.75 | -"- |
| 5. | ಬೆಂದೆ ಬೆಳ್ಳೂರು ಗ್ರಾಮದ ರಮನ ಕೆರೆಯ ಅಭಿವೃದ್ಧಿ | -"- | 1.50 | 0.45 | -"- |
| 6. | ಬೆಂದೆ ಬೆಳ್ಳೂರು ಗ್ರಾಮದ ಕುಂಜಿ ಕೆರೆ ಅಭಿವೃದ್ಧಿ | -"- | 1.50 | 0.45 | ವರ್ಕ್ ಆರ್ಡರ್ ನೀಡಿದೆ |
| 7. | ಕದಂಗ ಮರೂರು ಗ್ರಾಮದ ಮಾರಿ ಕೆರೆಯ ಅಭಿವೃದ್ಧಿ | -"- | 0.75 | 0.01 | ಹೊಸ ಕಾಮಗಾರಿ |
| 8. | ಕೆರೆ ಮಳ್ಳೂರು ಗ್ರಾಮದ ವೈಸಿರಿ ಕೆರೆಯ ಅಭಿವೃದ್ಧಿ | -"- | 1.50 | 0.01 | -"- |
| 9. | ಹಾತೂರು ನಾಲೆಯಲ್ಲಿ ತುಂಬಿದ ಮಣ್ಣನ್ನು ಹೊರ ತೆಗೆಯುವುದು ಮತ್ತು ಏರಿಯ ಅಭಿವೃದ್ಧಿ | -"- | 2.00 | 0.01 | -"- |

| 1 | 2 | 3 | 4 | 5 | 6 |
|---|---|---|---|---|---|
| 10. | ಮಲ್ಲಾರೆ ಗ್ರಾಮದ ಪೈಸಾರಿ ಕೆರೆ ದುರಸ್ತಿ | -"- | 5.00 | 0.01 | -"- |
| 11. | ನಿಟ್ಟೂರು (ಮಲ್ಲೂರು) ಗ್ರಾಮದ ವಾಲದಾಳ ಕಟ್ಟೆಯ ಎತ್ತರ ಏರಿಸುವುದು ಮತ್ತು ಒಡೆದು ಹೋಗಿರುವ ಕೆರೆ ದುರಸ್ತಿ | -"- | 8.00 | 0.01 | -"- |
| 12. | ಮಲ್ಲೂರು ಬಳಿ ಪಾಲಗಾಳ ಕೆರೆ ಮತ್ತು ನಾಲೆ ಅಭಿವೃದ್ಧಿ | -"- | 10.00 | 0.01 | -"- |
| 1. | ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀಮಂಗಲ ಅಣೆಕಟ್ಟು ಕಾಲುವೆ ನಿರ್ಮಾಣ | 4702-ಅಣೆಕಟ್ಟು ಪಿಕಪ್ ಬಂದಾರಗಳು. | 25.00 | 0.01 | -"- |
| 2. | ದಾತೂರು ಗ್ರಾಮದ ಬಳಿ ಪಿಕಪ್ ಮತ್ತು ಕಾಲುವೆ ದುರಸ್ತಿ | -"- | 5.00 | 0.01 | -"- |
| 3. | ಮಗ್ಗುಲ ಗ್ರಾಮದಲ್ಲಿ ಕುಮ್ಮಿ ಹೊಳೆಯ ಕೂಡು ಹಳ್ಳಕ್ಕೆ ಪಿಕಪ್ ನಿರ್ಮಾಣ. | -"- | 2.00 | 0.60 | -"- |
| 4. | ಬೆಟ್ಟಲಗಾಲ ಗ್ರಾಮದಲ್ಲಿ ಕುಮ್ಮಿ ಹೊಳೆಯ ಕೂಡು ಹಳ್ಳಕ್ಕೆ ಪಿಕಪ್ ನಿರ್ಮಾಣ. | -"- | 2.00 | 0.01 | -"- |
| 5. | ಜೀಟೋಳ ಗ್ರಾಮದ ಹಳ್ಳಕ್ಕೆ ಪಿಕಪ್ ನಿರ್ಮಾಣ ಮತ್ತು ದುರಸ್ತಿ ಕೆಲಸ. | -"- | 3.00 | 0.90 | ಟೆಂಡರ್ ಅನುಮೋದನೆ ಸಲ್ಲಿಸಿದೆ. |
| 6. | ಬಾಲಾಜಿ ಅಣೆಕಟ್ಟಿನ ಎಡದಂಡೆ ನಾಲೆಯ ಹೊಳೆತ್ತುವ ದುರಸ್ತಿ ಕೆಲಸ | 4702-ಅಣೆಕಟ್ಟು ಪಿಕಪ್ ಬಂದಾರಗಳು. | 8.00 | 0.01 | ಹೊಸಕಾಮಗಾರಿ |
| 7. | ಚಿಕ್ಕಸೂದ್ದೂರು ವೆಂಟೆಡ್ ಡ್ಯಾಂನ ದುರಸ್ತಿ ಮತ್ತು ನಾಲೆಯ ದುರಸ್ತಿ | -"- | 8.00 | 0.01 | -"- |

| 1 | 2 | 3 | 4 | 5 | 6 |
|---|---|---|---|---|---|
| 8. | ಕೊಲ್ಲಿತೋಡಿನ ಮರಳು ತೆಗೆಯುವ ಮತ್ತು ಕಾಡು ತೆಗೆಯುವ ಕೆಲಸ | -"- | 10.00 | 0.01 | -"- |
| 9. | ಹುದಿಕಾರಿ ಹೋಬಳಿ ನದಿಕಾರಿ ಗ್ರಾಮದಿಂದ ಪೊನ್ನಪ ಮನೆ ಹೊತ್ತಿನಲ್ಲಿ ತೋಟಕ್ಕೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣ. | -"- | 5.00 | 0.01 | -"- |
| 10. | ಬಾಲಾಜಿ ಬಲದಂಡೆ ನಾಲೆಯ 3.5 ಕಿ.ಮೀ.ನಲ್ಲಿ ಒಂದು ಕಾಲು ಸೇತುವೆ ನಿರ್ಮಾಣ ಮಲ್ಲಂದ ಗಣಪತಿಯವರ ನಾಲೆ ದುರಸ್ತಿ | -"- | 1.50 | 0.01 | -"- |
| 11. | ದೇವನೂರು ಎಡದಂಡೆ ಕಿ.ಮೀ. ಒಂದರಲ್ಲಿ ಒಂದೂ ಕಾಲು ಸೇತುವೆ ನಿರ್ಮಾಣ | -"- | 1.00 | 0.01 | -"- |
| 12. | ಬೆಳ್ಳರಗೊಲ್ಲಿ ಪೈಸಾರಿ ಪಿಕಪ್‌ನ ದುರಸ್ತಿ ಮತ್ತು ನಾಲೆಯ ದುರಸ್ತಿ | -"- | 2.00 | 0.01 | -"- |
| 13. | ಕರಡಿಗೋಡು ಗ್ರಾಮದ ಏತ ನೀರಾವರಿ ಯೋಜನೆ ರಕ್ಷಣಾ ಕಾಮಗಾರಿ ಕೆಲಸ | -"- | 2.00 | 0.01 | -"- |
| 14. | ಮಲ್ಲಾರೆ ಗ್ರಾಮದ ಗುದ್ದೂರು ಪಿಕಪ್ ಮತ್ತು ನಾಲೆಯ ದುರಸ್ತಿ | -"- | 2.00 | 0.01 | -"- |
| 15. | ಕೋಳಕೋಡು ಬೈಗೂರು ಗ್ರಾಮದ ಹಳ್ಳಕ್ಕೆ ಪಿಕಪ್ ಮತ್ತು ಪೋಷಕ ನಾಲೆ ನಿರ್ಮಾಣ | -"- | 2.00 | 0.01 | -"- |
| 16. | ಕುಂದು ಈಜೂರು ಗ್ರಾಮದ ತೋಡು ಕಾಮಗಾರಿ | -"- | 2.50 | 0.01 | -"- |
| 17. | ಕೆಂಚೆಂಗಾಲ ಗ್ರಾಮದಲ್ಲಿ ಮೂವತ್ತು ಮನೆ ಹರಿಜನ ಕಾಲೋನಿಯ ಹಳ್ಳಕ್ಕೆ ಪಿಕಪ್ ನಿರ್ಮಾಣ | -"- | 2.00 | 0.01 | -"- |
| 18. | ಬಿ.ಬೆಟ್ಟಂಗೇರಿ ಗ್ರಾಮದಲ್ಲಿರುವ ಹಳ್ಳಕ್ಕೆ ಪಿಕಪ್ ನಿರ್ಮಾಣ | -"- | 3.00 | 0.01 | -"- |

| 1 | 2 | 3 | 4 | 5 | 6 |
|---|---|---|---|---|---|
| 19. | ಪಾಲ್ದಾಳ ಕೆರೆಯ ಒಡ್ಡು ನಿರ್ಮಾಣ | -"- | 3.00 | 0.01 | -"- |
| 20. | ಮಾಚಡ್ಕೆ ತೋಡು ಬೇಗೂರು ಕಾಮಗಾರಿ | -"- | 3.00 | 0.01 | -"- |
| 1. | ಕೊಟ್ಟಗೇರಿ ಏತ ನೀರಾವರಿ ಯೋಜನೆ | 4702 ಏತ ನೀರಾವರಿ ಯೋಜನೆ | 10.00 | 0.02 | -"- |
| 2. | ಮಲ್ದಾರ ಗ್ರಾಮದ ಏತ ನೀರಾವರಿ ಯೋಜನೆ | -"- | 6.00 | 1.80 | -"- |
| 3. | ರುದ್ರಗುಪ್ಪ ಏತ ನೀರಾವರಿ ಯೋಜನೆಯ ಅಭಿವೃದ್ಧಿ ಕೆಲಸ | -"- | 3.00 | 0.01 | -"- |
| 4. | ಪೊನ್ನಂಪೇಟೆ ನಾಡು ಹಳ್ಳಿ ಗ್ರಾಮದಲ್ಲಿ ಏತ ನೀರಾವರಿ ಯೋಜನೆ | -"- | 25.00 | 0.01 | -"- |
| 5. | ಚಿಕ್ಕ ಸೊಡ್ಲೂರು ಅಣೆಕಟ್ಟಿನಿಂದ ಏತ ನೀರಾವರಿ ಯೋಜನೆ | -"- | 3.00 | 0.01 | -"- |
| 6. | ಪೊನ್ನಂಪೇಟೆ ನಾಡು ಮಡಿಕೇರಿ ಬಳಿ ಕೊಂಗಣ ಹೊಳೆಯಿಂದ ಏತ ನೀರಾವರಿ ಯೋಜನೆ | 4702 ಏತ ನೀರಾವರಿ ಯೋಜನೆ | 3.00 | 0.01 | ಹೊಸಕಾಮಗಾರಿ |
| 7. | ಕೊಂಗಣ ಏತ ನೀರಾವರಿ ಯೋಜನೆ | -"- | 40.00 | 0.01 | -"- |
| 8. | ಕೊಂಗಣ ಏತ ನೀರಾವರಿ ಯೋಜನೆ | -"- | 50.00 | 0.01 | -"- |
| 1. | ಕಾನೂರು ಗ್ರಾಮದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿ | 4711-01 ಪ್ರವಾಹ ನಿಯಂತ್ರಣ ಕಾಮಗಾರಿ | 16.50 | 0.01 | -"- |
| 2. | ಕೆಮ್ಮೂರು ಗ್ರಾಮದಲ್ಲಿ ಪ್ರೋವಿ ಲಂಗಡ ಗೋಪಾಲರವರ ಹೊಲದ ಬದಿಯಲ್ಲಿ ರಾಮತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ | -"- | 5.50 | 1.65 | ಅಂದಾಜಿಗೆ ಮಂಜೂರಾತಿಯಾಗಿದೆ. |
| 3. | ಬೆಸಗೂರು ಗ್ರಾಮದ ರೀರ್‌ಹೊಳೆ ಪ್ರವಾಹ ನಿಯಂತ್ರಣ ಕಾಮಗಾರಿ | -"- | 5.00 | 0.01 | -"- |

| 1 | 2 | 3 | 4 | 5 | 6 |
|---|---|---|---|---|---|
| 4. | ಶ್ರೀಮಂಗಲ ರಸ್ತೆ ಬದಿ ಲಕ್ಷ್ಮಣ ನದಿ ಪ್ರವಾಹ ನಿಯಂತ್ರಣ ಕಾಮಗಾರಿ | -"- | 12.00 | 3.60 | -"- |
| 5. | ಪೊನ್ನಂಪೇಟೆ ಕಾನೂರು ರಸ್ತೆ ಬದಿ ಲಕ್ಷ್ಮಣ ತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ | -"- | 10.00 | 0.01 | ಟೆಂಡರ್ ಸಲ್ಲಿಸಲಾಗಿದೆ. |
| 6. | ಗೋಣಿಕೊಪ್ಪಲಿನ ಸೇತುವೆಯ ಮೇಲ್ಭಾಗ ಹಿರೇಹೊಳೆ ದಂಡೆಯ ಪ್ರವಾಹ ನಿಯಂತ್ರಣ ಕಾಮಗಾರಿ | -"- | 22.00 | 6.60 | -"- |
| 7. | ಬಾಳಲೆ ಹೋಬಳಿ ನಲ್ಲೂರು ಗ್ರಾಮ ಬೆಟ್ಟು ಮೂಡನಾಡಯ್ಯನ ಹೊಲದ ಬಳಿ ಕೀರ್‌ದೊಳೆ ಪ್ರವಾಹ ನಿಯಂತ್ರಣ ಕಾಮಗಾರಿ | -"- | 5.00 | 0.01 | ಟೆಂಡರ್ ಕರೆಯಲಾಗಿದೆ. |
| 8. | ಕೊಟ್ಟಗೇರಿ ಗ್ರಾಮದಲ್ಲಿ ಲಕ್ಷ್ಮಣ ತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ | -"- | 5.00 | 0.01 | ಅಂದಾಜಿಗೆ ಮಂಜೂರಾತಿ ದೊರೆತಿದೆ. |
| | | | | **20.18** | |

(ಜಿಲ್ಲಾ ಪಂಚಾಯ್ತಿ)

## ವಿರಾಜಪೇಟೆ ತಾಲ್ಲೂಕಿನ ಕಾಮಗಾರಿಗಳ ಪಟ್ಟಿ

| ಕ್ರ.ಸಂ. | ಕಾಮಗಾರಿಯ ಹೆಸರು | ಶೀರ್ಷಿಕೆ | ಅಂದಾಜು ಮೊತ್ತ | 1998-99ನೇ ಸಾಲಿನ ಅನುದಾನ |
|---|---|---|---|---|
| 1. | ಮತ್ತೂರು ಗ್ರಾಮದ ಸರ್ವೆ ನಂ.30ರ ತೋಡಿಗೆ ಪಿಕಪ್ ದುರಸ್ತಿ | 4702-07-02 ಅಣೆಕಟ್ಟು ಮತ್ತು ಪಿಕಪ್ ನಿರ್ಮಾಣ | 2.35 | - |
| 2. | ಕದಮುಳ್ಳೂರು ಗ್ರಾಮ ಪಂಚಾಯ್ತಿ ಹೊರಿಯೂಲ ಹರಿಜನ ಕಾಲೋನಿಗೆ ಕೆರೆ ಅಭಿವೃದ್ಧಿ | 4702-01-3 ಒಡೆದುಹೋದ ಕೆರೆಗಳನ್ನು ಪೂರ್ವಸ್ಥಿತಿಗೆ ತರುವುದು | 1.20 | - |
| 3. | ಬಲ್ಯ ಮಂದೂರು ಗ್ರಾಮ ಪಂಚಾಯ್ತಿ ಬಲ್ಯ ಮಂದೂರು (ಕುಟ್ಟುಡಗುಂಡಿ) ಪೈಸಾರಿ ಕೆರೆ ಅಳವಡಿಸುವುದು. | 2702-1-102-72 ಕೆರೆ ಮತ್ತು ಬಾವಿ ಅಳವಡಿಸುವುದು. | 1.00 | - |
| | | ಒಟ್ಟು | **4.55** | |

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ಈಗಾಗಲೇ ನನ್ನ ಕ್ಷೇತ್ರದಲ್ಲಿ ಒಟ್ಟು 48 ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು 1998-99ಕ್ಕೆ ಅವರು ಗೊತ್ತು ಮಾಡಿಕೊಂಡಿದ್ದಾರೆ. ಅದಕ್ಕೆ ಬೇಕಾಗುವಂತಹ ಅಂದಾಜು ಪಟ್ಟಿ, ಅವರೇ ತಯಾರಿಸಿರುವ ರೀತಿಯಲ್ಲಿ 361.75 ಲಕ್ಷ ರೂ.ಗಳಾಗಿದೆ. ಆದರೆ ಇದಕ್ಕಾಗಿ ಸರ್ಕಾರ ಒದಗಿಸಿರುವ ಹಣ ಕೇವಲ 20 ಲಕ್ಷ 18 ಸಾವಿರ ರೂ.ಗಳು ಮಾತ್ರ. ಇಷ್ಟು ಅಗಾಧ ಮೊತ್ತದ ಪಟ್ಟಿಯನ್ನು ಸರ್ಕಾರ ತಯಾರು ಮಾಡಿ, ಎಷ್ಟು ವರ್ಷಗಳಲ್ಲಿ ಇದನ್ನು ಪೂರೈಸಬೇಕೆಂದು ತೀರ್ಮಾನ ಮಾಡಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ಸದನದಲ್ಲಿ ನನಗೆ ಉತ್ತರವನ್ನು ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. 36 ಕಾಮಗಾರಿಗಳನ್ನು ಪ್ರಾರಂಭಿಸಲು ಕೇವಲ ಒಂದು ಸಾವಿರ ರೂ.ಗಳ ಹಣವನ್ನು ತಾವು ಒದಗಿಸಿದ್ದೀರಿ. ಈ ಕಾಮಗಾರಿಗಳನ್ನು ಎಷ್ಟು ವರ್ಷಗಳಲ್ಲಿ ಹಂತ ಹಂತವಾಗಿ ಯಾವ್ಯಾವ ರೀತಿ ಹಣವನ್ನು ಬಿಡುಗಡೆ ಮಾಡಿ, ಪೂರೈಸಬೇಕೆಂದು ತಾವು ಅಂದಾಜು ಪಟ್ಟಿಯನ್ನು ಹಾಕಿಕೊಂಡಿದ್ದೀರಿ? ಆ ನಿಗದಿತ ವರ್ಷಗಳನ್ನು ಮತ್ತು ಬಿಡುಗಡೆ ಮಾಡುವಂತಹ ಹಣವನ್ನೂ ಕೂಡ ಈ ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಇವತ್ತು ಸಣ್ಣ ನೀರಾವರಿ ಇಲಾಖೆ ಮುಂದಿರತಕ್ಕ ಕಾಮಗಾರಿಗಳ ಪಟ್ಟಿ ಎಂದರೆ 40,000. ಇದಕ್ಕೆಲ್ಲಾ ಒಂದೇ ಸಾರಿ ಹಣ ಒದಗಿಸಬೇಕೆಂದರೆ,ಅದು ಬಹಳ ಕಷ್ಟವಾಗುತ್ತದೆ. ಹೋದ ಸಾರಿ ನನಗೆ ಬಜೆಟ್‌ನಲ್ಲಿ 72 ಕೋಟಿ ರೂ.ಗಳನ್ನು ಕೊಟ್ಟಿದ್ದರು. ಈ ಸಾರಿಯ ಬಜೆಟ್‌ನಲ್ಲಿ 72 ಕೋಟಿ ರೂ.ಗಳನ್ನು ಕೊಟ್ಟಿದ್ದರು. ಈ ಸಾರಿಯ ಬಜೆಟ್‌ನಲ್ಲಿ ನಮ್ಮ ಇಲಾಖೆಗೆ 109 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ನಾವು ಎಸ್.ಸಿ. : ಎಸ್.ಟಿ. ಕಾರ್ಪೋರೇಷನ್‌ಗೆ 20 ಕೋಟಿ ರೂ.ಗಳನ್ನು ಕೋಟ್ಟಿದ್ದೇವೆ. ನನ್ನ ಅಧಿಕಾರಿಗಳ ಸಂಬಳ ಸಾರಿಗೆಗೆ 10-15 ಕೋಟಿ ರೂ.ಗಳು ಖರ್ಚಾಗುತ್ತದೆ. ನನ್ನ ಹಳೆಯ ಕೆಲಸಗಳಿಗೆ ಒಂದಿಷ್ಟು ಹಣ ಹೋಗಿ ಕೇವಲ 30 ಕೋಟಿ ರೂ.ಗಳನ್ನು ಇವತ್ತು ಸದನದ ಸನ್ಮಾನ್ಯ ಸದಸ್ಯರುಗಳಿಗೆ ನಾನು ಹಂಚಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇದೊಂದು ಕಣ್ಣೀರಿನ ಕಥೆ. ಇದು ನಿಮ್ಮ ಪರಿಸ್ಥಿತಿ ಮತ್ತು ಶಾಸಕರ ಪರಿಸ್ಥಿತಿ ತೋರಿಸುತ್ತಿದೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಇರುವ ವಿಷಯವನ್ನು ಮಾತ್ರ ಹೇಳಿದ್ದೇನೆ. ಈ ಕಾರಣದಿಂದಾಗಿ ಸನ್ಮಾನ್ಯ ಸದಸ್ಯರು ತಮ್ಮ ಭಾವನೆಯನ್ನು ಏನು ವ್ಯಕ್ತ ಪಡಿಸಿದ್ದಾರೆ, ಅದರ ಬಗ್ಗೆ ಹೇಳುವುದಾದರೆ ನನ್ನ ಖಾತೆಗೆ ಬಂದಂತಹ ಹಣವನ್ನು ಎಲ್ಲಾ ಸನ್ಮಾನ್ಯ ಸದಸ್ಯರುಗಳಿಗೆ ಸಮಾನಾಂತರವಾಗಿ ಹಂಚಿ ನಾನು ನನ್ನ ಖಾತೆಯ ಹಣವನ್ನು ಉಪಯೋಗಿಸುತ್ತೇನೆ. ಆದಷ್ಟು ಇನ್ನು ಮುಂದಿನ ಸಾರಿ ಈ ಸಣ್ಣ ನೀರಾವರಿ ಇಲಾಖೆಗೆ ಹೆಚ್ಚಿನ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ರೀತಿ ಹೆಚ್ಚು ಹಣ ಕೊಟ್ಟಾಗ, ಆದಷ್ಟು ಜಾಗ್ರತೆ ಕಾಮಗಾರಿಗಳನ್ನು ಪೂರೈಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ ಬಸವರಾಜ್ : ಮಾನ್ಯ ಅಧ್ಯಕ್ಷರೇ, ಸರ್ಕಾರದವರು 361.75 ಲಕ್ಷ ರೂ.ಗಳ ಒಂದು ಅಂದಾಜು ಪಟ್ಟಿ ತಯಾರಿಸಿದೆ. ಸರ್ಕಾರ ಇದಕ್ಕೊಂದು ಕಾರ್ಯಸೂಚಿ

ಮಾಡಿಕೊಳ್ಳಬೇಕಲ್ಲವೇ? ಇಷ್ಟು ವರ್ಷದಲ್ಲಿ ನಾವು ಈ ಒಂದು ಕಾಮಗಾರಿಯನ್ನು ಪೂರ್ತಿ ಮಾಡುತ್ತೇವೆ ಎಂದು ನೀವು ಪ್ಲಾನ್ ಮಾಡಿಲ್ಲವೇ? ಇದಕ್ಕಾಗಿ ಹಣದ ಅವಕಾಶವನ್ನೂ ಕೂಡ ನಾವು ಪ್ಲಾನ್‌ನಲ್ಲಿ ಮಾಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಇದಕ್ಕಾಗಿ ನೀವು ಎರಡು ವರ್ಷ ತೆಗೆದುಕೊಳ್ಳುತ್ತೀರೋ, ಮೂರು ವರ್ಷ ತೆಗೆದುಕೊಳ್ಳುತ್ತೀರೋ ಎಂದು ನಿಮಗೆ ಕೇಳುತ್ತಿದ್ದೇನೆ. ಈ ಕಾಮಗಾರಿಗಾಗಿ ಕನಿಷ್ಠ ಶೇ 10ರಷ್ಟು ಹಣವನ್ನು ತಾವು ತಮ್ಮ ಅನುದಾನದಲ್ಲಿ ಈ ವರ್ಷ ಮಂಜೂರು ಮಾಡಿದ್ದಾರೆ ಬಹುಶಃ ನಮಗೆ ಸಂತೋಷವಾಗುತ್ತಿತ್ತು. ಹೋದ ವರ್ಷ ಕೇವಲ 2 ಲಕ್ಷ 78 ಸಾವಿರ ರೂ. ಗಳನ್ನು ಮಾತ್ರ ನನ್ನ ಕ್ಷೇತ್ರಕ್ಕೆ ಒದಗಿಸಿದ್ದೀರಿ. ಈ ವರ್ಷ ಇಷ್ಟು ಅಗಾಧ ಪ್ರಮಾಣದ ಕೆಲಸ ಇದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಹಾಗಾದರೆ ಇದನ್ನು ಎಷ್ಟು ವರ್ಷದಲ್ಲಿ ಪೂರೈಸುತ್ತೀರಿ? ಇನ್ನೇನಾದರೂ ಅನುದಾನ ಬಂದರೆ ಇನ್ನೂ ಒಂದೈವತ್ತು ಲಕ್ಷ ಹಣ ಬಿಡುಗಡೆ ಮಾಡುತ್ತೇವೆ, ಎಂದೇನಾದರೂ ತಾವು ನಿಖರವಾಗಿ ಹೇಳಲಿಕ್ಕೆ ಸಾಧ್ಯವಿದ್ದರೆ ದಯವಿಟ್ಟು ಹೇಳಬೇಕು. ಮತ್ತು ಆ ನಿಖರತೆಯನ್ನೂ ಕೂಡ ಸ್ಪಷ್ಟಪಡಿಸಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ತಿಪ್ಪೆಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ನಿಖರವಾಗಿ ಹೇಳುವಂತಹ ಪರಿಸ್ಥಿತಿಗೆ ಬದ್ಧನಾಗಿರಲಿಕ್ಕೆ ಸಾಧ್ಯವಿಲ್ಲ. ಕಾರಣ ಇಷ್ಟೇ, ಹೆಚ್ಚಿಚ್ಚು ಹಣ ಪಡೆದು, ಹೆಚ್ಚಿನ ಕಾಮಗಾರಿಗಳನ್ನು ಮಾಡುತ್ತೇನೆ,ಆ ಕಾಮಗಾರಿಗಳನ್ನು ಮಾಡುವಂತಹ ಸಂದರ್ಭದಲ್ಲಿ ಇವತ್ತು ಸನ್ಮಾನ್ಯ ಸದಸ್ಯರು ಹೇಳಿದಂತೆ ಅವರ ಕ್ಷೇತ್ರದ ಕಾಮಗಾರಿಗಳಿಗೆ ಕೇವಲ 20 ಲಕ್ಷ ರೂ.ಗಳನ್ನಷ್ಟೇ ಕೊಟ್ಟಿಲ್ಲ. ಸಣ್ಣ ನೀರಾವರಿ ಇಲಾಖೆಯಿಂದ 20 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. ಇದಲ್ಲದೇ ಜಿಲ್ಲಾ ಪಂಚಾಯಿತಿ ಮತಿಯಿಂದ 10 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. ಇದೇ ತರಹ ಹಣದ ಲಭ್ಯತೆ ನೋಡಿಕೊಂಡು ಆದಷ್ಟು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತದೆಯೇ ವಿನಃ ನಾನು ಮುಂದೆ ಎಷ್ಟು ಹಣ ಬರುತ್ತದೆ, ಎಷ್ಟು ಕೊಡುತ್ತೇನೆ ಎಂಬುದನ್ನು ನಾನು ಯೋಜನೆ ರೂಪಿಸಿದ ಮೇಲೆ ಸನ್ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ಸರ್ಕಾರದವರು 25 ಲಕ್ಷ ರೂ.ಗಳಿಗೆ ಕೇವಲ ಒಂದು ಸಾವಿರ ರೂ.ಗಳನ್ನು ಮಾತ್ರ ಒದಗಿಸಿದ್ದಾರೆ. ಇದನ್ನು ಸರ್ಕಾರದವರು ಇನ್ನು ಎಷ್ಟು ವರ್ಷದಲ್ಲಿ ಮುಗಿಸಬೇಕೆಂದು ತೀರ್ಮಾನ ಮಾಡಿದ್ದೀರಾ ಎಂಬುದನ್ನು ತಾವು ದಯವಿಟ್ಟು ಹೇಳಿಬಿಡಿ,ಇಲ್ಲದಿದ್ದರೆ ಈ ಕೆಲಸ ಕೈಗೆತ್ತಿಕೊಳ್ಳುವುದೇ ಬೇಡ.

ಅಧ್ಯಕ್ಷರು : ಮಾನ್ಯ ಬಸವರಾಜ್‌ರವರೇ, ನೀವು ಕೇಳುವುದೇನೋ ಸರಿ. ಪಾಪ ಮಾನ್ಯ ಸಚಿವರು ಹೇಳುವುದಕ್ಕೆ ಒದ್ದಾಡುತ್ತಿದ್ದಾರೆ. ನಾನು ಅನೇಕ ಸಲ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಈಸ್ಟ್ ಇಂಡಿಯಾ ಕಂಪನಿಯನ್ನು ನಡೆಸುವುದಕ್ಕೆ ಇದ್ದಂತಹ ವ್ಯವಸ್ಥೆಯನ್ನು ಇಡೀ ಇಂಡಿಯಾ ದೇಶ ನಡೆಸುವುದಕ್ಕೆ ನಾವು ಇಟ್ಟುಕೊಂಡು, ನೂರಕ್ಕೆ ಅರವತ್ತೆಂಟು ರೂ. ನಮ್ಮ ಟ್ರೆಜರಿಯಲ್ಲಿ ಇರುವಂತಹ ದುಡ್ಡೆಲ್ಲಾ ಸಂಬಳ ಸಾರಿಗೆಗಳಿಗೆ ಶೇಕಡ ಒಂದರಷ್ಟು ಇರುವ ಜನರಿಗೆ ಕೊಟ್ಟು ಬಿಟ್ಟರೆ, ದುಡ್ಡು ಎಲ್ಲಿಂದ ಬರುತ್ತದೆ ಎಂಬ ಬಗ್ಗೆ ಇಡೀ ಸದನ ಯೋಚನೆ ಮಾಡೋಣ.

ಇನ್ನೂ ಇದನ್ನೆಲ್ಲಾ ನಾವು ಇಟ್ಟು ಕೊಳ್ಳಬೇಕೆ? ನಿನ್ನೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಯೊಂದು ಬಂದಾಗ ಅಲ್ಲಿ ನೊಂದಾಯಿಸಿಕೊಂಡ 4 ಲಕ್ಷ 60 ಸಾವಿರ ಜನರಲ್ಲಿ 5 ಸಾವಿರ ಜನರಿಗೆ ಮಾತ್ರ ಉದ್ಯೋಗ ಸಿಕ್ಕಿದೆ ಎಂಬ ಮಾಹಿತಿ ನಿಮ್ಮ ಗಮನಕ್ಕೆ ಬರಲಿಲ್ಲವೇ? ಈ ತರಹದ ಕೆಲಸಕ್ಕೆ ಬಾರದವನ್ನೆಲ್ಲಾ ಮೈಮೇಲೆ ಎಷ್ಟೊಂದು ಹೊತ್ತುಕೊಂಡಿದ್ದೇವೆ ಗೊತ್ತೇ? ನೀರಾವರಿ ಇಲ್ಲ, ಶಿಕ್ಷಣ ಇಲ್ಲ, ವಿದ್ಯುಚ್ಶಕ್ತಿಯೂ ಇಲ್ಲ. ಎಲ್ಲಾ ಹಣ ಅವರಿಗೆ ಹೋಗುತ್ತಿದೆ. ಅವರದೇ ದಾಸ್ತಾನುಗಳನ್ನು ನಾವಿಲ್ಲಿ ತರುತ್ತೇವೆ. ಅರೆ ಕಾಲಿಕ, ಪೂರ್ಣ ಕಾಲಿಕ, ಪೂರ್ಣ ಅರೆಕಾಲಿಕ, ಅರ್ಧ ಪೂರ್ಣ ಕಾಲಿಕ, ಪಾದೋನ್ನತ .....

ಶ್ರೀ ಜೆ.ಬಿ. ಶಿವಕುಮಾರ್ : ವಿದ್ಯಾರ್ಥಿಗಳ ಭವಿಷ್ಯದೊಡನೆ ಚೆಲ್ಲಾಟವಾಡುತ್ತಾ ಇವತ್ತು ಮೌಲ್ಯಮಾಪನ ಬಹಿಷ್ಕಾರ ಮಾಡುತ್ತಿದ್ದಾರೆ.

ಅಧ್ಯಕ್ಷರು : ಎಲ್ಲಾ ಅವರಿಗೇ ಹೋಗುತ್ತಿದೆ, ಜನರಿಗೆ ಏನೂ ಇಲ್ಲ. ನಾವೂ ಸುಮ್ಮನೆ ಜನಪ್ರತಿನಿಧಿಗಳೆಂದು ಇಲ್ಲಿಗೆ ಬರುತ್ತೇವೆ. ನಾನೇನು ಹೇಳುತ್ತೇನೆ ಎಂದರೆ, ನಾವು ಈ ಬಗ್ಗೆ ಪಾರ್ಟಿ ಲೈನ್ಸ್‌ನಲ್ಲಿ ಯೋಚನೆ ಮಾಡುವುದು ಬೇಡ. ನಾನು ಮೊನ್ನೆ ಮಾನ್ಯ ಸುರೇಶ್‌ಕುಮಾರ್‌ರವರಿಗೆ, ಮಾನ್ಯ ಡಿ.ಆರ್. ಪಾಟೀಲ್‌ರವರಿಗೆ ಹಾಗೂ ಇತರರಿಗೆ ಈ ಬಗ್ಗೆ ನಾವು ಚರ್ಚೆ ಮಾಡೋಣ ಒಂದು ಸಜೆಸ್ಟ್ ಮಾಡಿದ್ದೇನೆ. ಈ ಬ್ಯೂರೋಕ್ರೆಟಿಕ್ ಸೆಟಪ್ ನಾವು ಇಟ್ಟುಕೊಳ್ಳಬೇಕಾ? ಬೇಡವೇ? ಇಷ್ಟು ಹಣವನ್ನು ನಾವು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ಗೆ ಖರ್ಚು ಮಾಡಬೇಕಾ ಎಂಬ ಬಗ್ಗೆ ಎರಡು ದಿವಸಗಳ ಚರ್ಚೆ ಬೇಕಾದರೆ ಇಟ್ಟು ಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಮೈನರ್ ಇರಿಗೇಷನ್‌ಗೆ ಹೇಗಾದರೂ ಮಾಡಿ ಅಲೋಕೇಷನ್ ಅನ್ನಾದರೂ ಜಾಸ್ತಿ ಮಾಡಬೇಕು.

ಅಧ್ಯಕ್ಷರು : ಗುರುಮಿಠಕಲ್ ಹಾಗೂ ಶ್ರೀನಿವಾಸಪುರ ಎರಡೂ ಕಡೆಗೂ ಅದರ ಅಗತ್ಯವಿದೆ. ಮೈನರ್ ಇರಿಗೇಷನ್‌ಗೆ ಅಲೋಕೇಷನ್ ಹೆಚ್ಚು ಕೊಡಿ ಒಂದು ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಅಪೀಲ್ ಮಾಡಿಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಣ್ಣ ನೀರಾವರಿ ಇಲಾಖೆಗೆ ಕೇವಲ 30 ಕೋಟಿ ರೂ.ಗಳನ್ನು ಕೊಟ್ಟರೆ ಎಲ್ಲಿ ಸಾಕಾಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ : ಭಾರೀ ನೀರಾವರಿ ಯೋಜನೆಗಳಿಗೆ ಖರ್ಚಾಗುವ ದುಡ್ಡು ಪರ್ ಏಕರ್ ನಾವು ಖರ್ಚು ಮಾಡುವ ದುಡ್ಡು When compared to minor irrigation, minor irregation is more benificial statistically also. ಆದರೆ ಈಗ ಭಾರೀ ನೀರಾವರಿ ಯೋಜನೆಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಆದರೆ ವಿರೋಧ ಪಕ್ಷದ ನಾಯಕರ ಸಲಹೆ ಒಪ್ಪುತ್ತೇನೆ. ನಾವು ಹೆಚ್ಚು ಹಣವನ್ನು ಈ ಸ್ಮಾಲ್ ಅಂಡ್ ಮೀಡಿಯಮ್ ಇರಿಗೇಷನ್‌ಗೆ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮೀಡಿಯಮ್‌ಗೆ ಏನೂ ಸಪರೇಟ್ ದುಡ್ಡು ಇಲ್ಲ. ಮೇಜರ್ ಇರಿಗೇಷನ್‌ಗೆ ದುಡ್ಡು ಇದ್ದರೆ ನೀವು ಮೀಡಿಯಮ್ ಇರೀಗೇಷನ್‌ಗೆ ಡೈವರ್ಟ್ ಮಾಡುತ್ತಿದ್ದೀರಿ, ಕಾರಣ ಅದು ಅವರ ಜೊತೆಯಲ್ಲೇ ಇರುತ್ತದೆ. ಮೈನರ್ ಇರಿಗೇಷನ್‌ಗೆ ಎಲ್ಲೂ ಪ್ರಾವಿಷನ್ ಇಲ್ಲ. ಆದರೆ ಜೆಡ್‌ಪಿಯವರ ಹತ್ತಿರ ಸಣ್ಣ ನೀರಾವರಿಗೆ ಇವರಿಗಿಂತ ಕಡಿಮೆ ಇರುತ್ತದೆ. ಅವರು ಮಾಡುವ ಹಾಗಿಲ್ಲ. ಅವರ ಹತ್ತಿರ ಪ್ರತಿಯೊಬ್ಬ ಮೆಂಬರ್ ಎರಡು ಲಕ್ಷ ಮೂರು ಲಕ್ಷ ಹಂಚಿಕೊಳ್ಳುವುದರಲ್ಲಿ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ವರ್ಷಕ್ಕೆ ನಾಲ್ಕು ಕೆರೆಗೆ ಹಣ ಕೊಡುವುದಕ್ಕೆ ದುಡ್ಡು ಇಲ್ಲ ಎಂದರೆ ಅವರು ಒಬ್ಬ ಸಚಿವ ಸಂಪುಟದ ಸಚಿವರಾಗಿ ಕೆಲಸ ಮಾಡುವ ಕೆಲಸ. ಅದು ನಿಜವಾಗಿ ಒಳ್ಳೆಯದೂ ಅಲ್ಲ . ಮುಖ್ಯಮಂತ್ರಿಗಳು ಗಮನ ಕೊಡಬೇಕು. ಒಬ್ಬ ಮಂತ್ರಿಯೆಂದು ಮಾಡುವುದು ಏತಕ್ಕೆ?

ಶ್ರೀ ಮಾದಪ್ಪ : ಕೊಡಗು ಜಿಲ್ಲೆಗೆ ಒಂದು ಸಣ್ಣ ನೀರಾವರಿ ಸಬ್‌ಡಿವಿಷನ್ ಕೊಟ್ಟಿದ್ದಾರೆ. ಒಬ್ಬರು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಇಬ್ಬರು ಅಸಿಸ್ಟೆಂಟ್ ಇಂಜಿನಿಯರ್ ಇದ್ದಾರೆ. ಯಾವ ಸಿಬ್ಬಂದಿ ಇಲ್ಲ. ನಮಗೆ ಹಣ ಕೊಡದೆ ಹೋದರೆ ಆ ಇಲಾಖೆಗೆ ಕೊಟ್ಟ ಕಛೇರಿ ಏನಿದೆ, ಅದಕ್ಕೆ ನೌಕರರೂ ಇಲ್ಲ, ಕಛೇರಿಗೆ ಕೊಠಡಿ ಇಲ್ಲ,

ಅಧ್ಯಕ್ಷರು : ಅವರು ಇಲ್ಲದಿದ್ದರೆ ಹೋಯಿತು, ನೀರಾವರಿ ಕೆಲಸ ಆಗಲಿ. ನಮ್ಮ ಹಿಂದಿನ ಪಾಳೆಗಾರರು ಕೆರೆಗಳನ್ನು ಕಟ್ಟಿದಾಗ ಯಾವ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಇರಲಿಲ್ಲ, ಫಸ್ಟ್ ಕ್ಲಾಸ್ ಕೆರೆಗಳನ್ನು ಕಟ್ಟಿದರು. ಯಾವ ಆಫೀಸ್ ಇರಲಿಲ್ಲ, ಫ್ಯಾನ್ ಇರಲಿಲ್ಲ. ಟೆಲಿಫೋನ್ ಇರಲಿಲ್ಲ. ಜೀಪ್ ಇರಲಿಲ್ಲ, ಟಿಎಡಿಎ ಎನೂ ಇರಲಿಲ್ಲ. ಫಸ್ಟ್ ಕ್ಲಾಸ್ ಕೆರೆಗಳು ಕಟ್ಟಿದ್ದಾರೆ.

ಶ್ರೀ ತಿಪ್ಪೇಸ್ವಾಮಿ : ಆದಷ್ಟು ಮಾಡಿ ಕೂಡುವುದಕ್ಕೆ ಪಯತ್ನ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಪ್ರಕಾಶ್ : ಲಿಫ್ಟ್ ಇರಿಗೇಷನ್‌ಗೆ ದುಡ್ಡು ಕೊಟ್ಟರೆ ಲಿಫ್ಟ್ ಇರಿಗೇಷನ್ ಚಾಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ತಿಪ್ಪೇಸ್ವಾಮಿಯವರೇ, ಪ್ರಕಾಶ್‌ರವರು ಹೇಳಿದ್ದು ಗಮನದಲ್ಲಿಟ್ಟುಕೊಳ್ಳಿ.

**ಮುಳವಾಡ ಏತ ನೀರಾವರಿ ಯೋಜನೆ**

394 - ಶ್ರೀ ಬಸವನಗೌಡ ರಾ. ಪಾಟೀಲ (ಬಿಜಾಪುರ) : ಮಾನ್ಯ ಭಾರಿ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಮುಳವಾಡ ಏತ ನೀರಾವರಿ (ಯುಕೆಪಿ) : ಯೋಜನೆಯ ಬಳೂತಿ ಸಮೀಪ ನಿರ್ಮಿಸಲಾಗುತ್ತಿರುವ ಜಾಕ್‌ವೆಲ್ ಕೆಲಸ ಮಂದಗತಿಯಲ್ಲಿ ನಡೆದಿರುವುದು ಮತ್ತು*